ದಿನಾಂಕಃ 30-06-2017 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ

ಹೆಳವಯ್ಯನ ಮಗ ಬಸವಯ್ಯ ನನ್ನ ತಂದೆ. ಬಸವಯ್ಯನಿಗೆ 80-83 ವರ್ಷ ಆಗಿದೆ. ನನ್ನ ತಂದೆಗೆ ಸ್ವಲ್ಪ ಕಿವಿ ಕೇಳುವುದಿಲ್ಲ, ಆದ್ದರಿಂದ ಅವರು ನ್ಯಾ.ಕ್ಕೆ ಬಂದು ಸಾಕ್ಷ್ಯ ನುಡಿಯಲು ತೊಂದರೆ ಇದೆ. ನನ್ನ ತಂದೆಗೆ ಕಿವಿ ಕೇಳದೇ ಇರುವ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲಾತಿ ಇರುವುದಿಲ್ಲ. ನನ್ನ ತಂದೆಗೆ ಕಿವಿ ಕೇಳದೇ ಇರುವ ಬಗ್ಗೆ ನಾನು ಯಾವುದೇ ಆಸ್ಪತ್ರೆಯಲ್ಲಿ ಔಷೋಧೋಪಚಾರ ಮಾಡಿಸಿರುವುದಿಲ್ಲ ಮತ್ತು ಅದರ ಬಗ್ಗೆ ದಾಖಲೆ ಇರುವುದಿಲ್ಲ. ನಿಡಿ-1 ನ್ನು ಬರೆಸುವಾಗ ನನ್ನ ತಂದೆಯ ವಯಸ್ಸು 70 ಎಂದು



ಬರೆಸಿದ್ದೆ ಎಂದರೆ ಸರಿ. ನನ್ನ ತಂದೆ ಆರೋಗ್ಯವಾಗಿದ್ದು, ನ್ಯಾ.ಕ್ಕೆ ಬರಲು ಶಕ್ತನಾಗಿದ್ದು, ಒಂದು ವೇಳೆ ಅವರು ನ್ಯಾ.ಕ್ಕೆ ಬಂದು ಸಾಕ್ಷ್ಯ ನುಡಿದಿದ್ದಲ್ಲಿ ಸತ್ಯವನ್ನು ಒಪ್ಪಿಕೊಳ್ಳಬೇಕಾಗಬೇಕೆಂಬ ಕಾರಣಕ್ಕಾಗಿ ನನ್ನನ್ನು ಕಳುಹಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಸಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರವನ್ನು ತಯಾರು ಮಾಡಲು ನನ್ನ ತಂದೆಯವರನ್ನು ಕರೆದುಕೊಂಡು ಬಂದು, ಮಾಹಿತಿಯನ್ನು ನೀಡಿರುತ್ತೇನೆ. ನಾನು ನ್ಯಾ.ದಲ್ಲಿ ಏನು ಸಾಕ್ಷ್ಯವನ್ನು ನುಡಿಯಬೇಕು ಎಂದು ನನ್ನ ತಂದೆ ಕಡೆಯಿಂದ ತಿಳಿದುಕೊಂಡು ಬಂದಿರುತ್ತೇನೆ. ರಾಮಯ್ಯ ಮತ್ತು ಬಸವಯ್ಯ ನಡುವೆ 1976 ನೇ ಇಸವಿಯಲ್ಲಿ ನಡೆಯಲಾಗಿದೆ ಎಂದು ಹೇಳಲಾದ ಪಂಚಾಯಿತಿ ಪಾಲುಪಾರೀಕತ್ತನ್ನು ನಾನು ನ್ಯಾದ ಮುಂದೆ ಹಾಜರುಪಡಿಸಿರುತ್ತೇನೆ. ನಾನು 4ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಓದಲು-ಬರೆಯಲು ಮತ್ತು ಸಹಿ ಮಾಡಲು ಬರುತ್ತದೆ. ನಾನು ಯಾವುದೇ ಪಂಚಾಯಿತ್ ಪಾಲುಪಾರಿಕತ್ತನ್ನು ನ್ಯಾ.ದ ಮುಂದೆ ಹಾಜರುಮಾಡದೇ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವಯ್ಯ ಮತ್ತು ರಾಮಯ್ಯ ನಡುವೆ ಆದ ಪಂಚಾಯಿತ್ ಪಾಲುಪಾರೀಕತ್ತು ಯಾವ ದಿನಾಕ ಮತ್ತು ತಿಂಗಳು ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಪಂಚಾಯಿತ್ ಪಾಲುಪಾರೀಕತ್ತಿನಂತೆ ರಾಮಯ್ಯನಿಗೆ ಸರ್ವೆ ನಂಃ 36 ರಲ್ಲಿ 6 ಎಕರೆ 15 ಗುಂಟೆ, ಸರ್ವೆ ನಂಃ 46 ರಲ್ಲಿ 1 ಎಕರೆ 2 ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ. ಅದೇ ರೀತಿ

ಬಸವಯ್ಯನಿಗೆ ಸರ್ವೆ ನಂಃ 50 ರಲ್ಲಿ 5 ಎಕರೆ 2 ಗುಂಟೆ, ಸರ್ವೆ ನಂಃ 46 ರಲ್ಲಿ 1 ಎಕರೆ 2 ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ.

ಸದರಿ ಪಂಚಾಯಿತ್ ಪಾಲುಪಾರೀಕತ್ತು ಕಂದಾಯ ದಾಖಲಾತಿಗಳಲ್ಲಿ ಖಾತೆ ನಮೂದಾಗಿರುವುದಿಲ್ಲ. ನನ್ನ ತಂದೆ ಪಾಲಿಗೆ ಬಂದಂತಹ ಆಸ್ತಿಗೆ ಕಂದಾಯವನ್ನು ಇಲ್ಲಿಯವರೆವಿಗೂ ಪಾವತಿ ಮಾಡುತ್ತಾ ಬಂದಿದ್ದು,ಅದರ ಬಗ್ಗೆ ಕಂದಾಯ ರಸೀದಿಗಳನ್ನು



ನ್ಯಾ.ದ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯು ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಇರುವುದಿಲ್ಲ. ದಾವಾ ಷೆಡ್ಯೂಲ್ ಐಟಂ ನಂಃ 1 ಮತ್ತು 2 ಕ್ಕೆ ನೀಡಿರುವ ಚಕ್ಕುಬಂಧಿ ಸತ್ಯವಾಗಿರುತ್ತದೆ.

ನಮ್ಮ ಊರಿನಲ್ಲಿ ಬೇಕಾದಷ್ಟು ಜನ ರಾಮಯ್ಯ ಎಂಬ ಹೆಸರಿನಿಂದ ಇದ್ದಾರೆ ಎಂದರೆ ಸರಿ. 1ನೇ ವಾದಿಗೆ ಇಬ್ಬರು ಗಂಡುಮಕ್ಕಳಿದ್ದು, ಅವರು ಮೂರ್ತಿ ಮತ್ತು ರಮೇಶ ಎಂದರೆ ಸರಿ. ರಮೇಶ ಎಂಬುವವರು ತೀರಿಕೊಂಡಿದ್ದು, ಅವರ ಹೆಂಡತಿ ವಿ.ದಾಕ್ಷಾಯಿಣಿ ಇದ್ದಾರೆ ಎಂದರೆ ಸರಿ. 1ನೇ ವಾದಿ ದೊಡ್ಡಮ್ಮ ಹಿಂದೂ ಸಂಪ್ರದಾಯದಂತೆ ರಾಮಯ್ಯನವರ ಪತ್ನಿ ಎಂದರೆ ಸರಿ. ನನ್ನ ವಾದಪತ್ರದಲ್ಲಿ ನನ್ನ ದೊಡ್ಡಪ್ಪ ರಾಮಯ್ಯನಿಗೆ ಇಬ್ಬರು ಪತ್ನಿಯರು ಎಂದು ತಿಳಿದುಬಂದಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ರಾಮಯ್ಯನವರು ಎರಡನೇ ವಿವಾಹ ಮಾಡಿಕೊಂಡಿರುವ ಎಂದು ನನಗೆ ಗೊತ್ತಿಲ್ಲ, ನನಗೆ ಹಾಲಿ 52 ವರ್ಷ ವಯಸ್ಸು. ರಾಮಯ್ಯ ಇವರು 2ನೇ ಮದುವೆಯಾದ ಸಮಯದಲ್ಲಿ 1ನೇ ವಾದಿಗೆ ಮೂರು ಜನ ಮಕ್ಕಳಿದ್ದರು.

ನಾನು ಹೇಳುವಂತ ಕಾಲಕ್ಕೆ ರಾಮಯ್ಯನಿಗೆ ರಮೇಶ ಮತ್ತು ಮೂರ್ತಿ ಎಂಬ ಇಬ್ಬರು ಗಂಡುಮಕ್ಕಳಿದ್ದರು ಎಂದರೆ ಸರಿ. ರಾಮಯ್ಯ ಎರಡನೇ ಮದುವೆಯಾದ ಬಗ್ಗೆ ಲಗ್ನ ಪತ್ರಿಕೆಯನ್ನು ಮಾಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ನಮ್ಮ ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿದೆ ಎಂದು ಬರೆಸಿದ್ದೇನೆ. ಅದರ ಬಗ್ಗೆ ನಾನು ಯಾವುದೇ ದಾಖಲೆಯನ್ನು ನ್ಯಾ.ದ ಮುಂದೆ ಹಾಜರುಮಾಡಿಲ್ಲ, ಸದರಿ ಪಾಲುಪಾರೀಕತ್ತಿನಲ್ಲಿ ರಾಮಯ್ಯನಿಗೆ ಬಂದಂತಹ ಹಿಸ್ಸೆ, ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿದೆ ಎಂದು ತೋರಿಸಲು ನ್ಯಾ.ದ ಮುಂದೆ ಯಾವುದೇ

ದಾಖಲಾತಿಯನ್ನು ಹಾಜರುಮಾಡಿರುವುದಿಲ್ಲ, ನನ್ನ ಪ್ರತಿವಾದಪತ್ರದಲ್ಲಿ ಹೇಳಿದಂತೆ ದಾವಾಸ್ವತ್ತುಗಳನ್ನು ಸುಧಾರಣೆಯನ್ನು ಮಾಡಲು ತುಂಬಾ ಹಣವನ್ನು ಖರ್ಚು ಮಾಡಿದ್ದೇನೆಂದು ತೋರಿಸಲು



ನ್ಯಾ.ದ ಮುಂದೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಸರ್ವೆ ನಂ: 36 ಹಾಗೂ ಸರ್ವೆ ನಂ: 46 ಈ ಎರಡೂ ಜಮೀನುಗಳು ಹಳವಯ್ಯನಿಗೆ ಸೇರಿದಂತಹ ಜಮೀನು ಎಂದು ತೋರಿಸಲು ನ್ಯಾ.ದ ಮುಂದೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ರಾಮಯ್ಯನಿಗೆ ಬಂದಂತಹ ಆಸ್ತಿಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸುವಂತಹ ದಾಖಲೆಯನ್ನು ನ್ಯಾ.ದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹಾಜರುಪಡಿಸಿರುವಂತಹ ದಾಖಲೆಯಲ್ಲಿ ಇರುತ್ತವೆ ಎಂದಿದ್ದಾರೆ.

ದಾವಾ ಐಟಂ ನಂ: 1 ಮತ್ತು 2 ಹಳವಯ್ಯನಿಗೆ ಸೇರಿದಂತಹ ಒಟ್ಟು ಕುಟುಂಬ ಮತ್ತು ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸರಿ. ನಾನು ಈ ದಾವೆಯಲ್ಲಿ ನಮೂದಿಸಿರುವ ಪಕ್ಷಕಾರರನ್ನು ಹೊರತುಪಡಿಸಿ, ಬೇರೆ ಯಾರನ್ನು ಪಕ್ಷಕಾರರನ್ನಾಗಿ ಸೇರಿಸುವ ಅಗತ್ಯ ಇರುವುದಿಲ್ಲ, ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ 1976ರಲ್ಲಿ ಪಂಚಾಯಿತಿ ಪಾಲುಪಾರೀಕತ್ತು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ, ಇಲ್ಲಿಯವರೆವಿಗೂ ದಾವಾಸ್ವತ್ತುಗಳು ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ, ರಾಮಯ್ಯ ಎರಡನೇ ವಿವಾಹ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ, 3 ರಿಂದ 11ನೇ ಪ್ರತಿವಾದಿಗಳ ಜೊತೆ ಶಾಮೀಲಾಗಿ ರಾಮಯ್ಯನಿಗೆ ಎರಡನೇ ಮದುವೆಯಾಗಿದೆ ಎಂದು ಹೇಳಿ, ಸುಳ್ಳು ಕಟ್ಟುಕಥೆಯನ್ನು ಕಟ್ಟಿದ್ದೇವೆ ಎಂದರೆ ಸರಿಯಲ್ಲ, ದಾವಾ ಆಸ್ತಿಗಳು ಕಾನೂನು ಪ್ರಕಾರ ವಾದಿಗಳು ಮತ್ತು 1 ಮತ್ತು 2ನೇ ಪ್ರತಿವಾದಿ ಇವರ ಜಂಟಿ ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ.

ವಾದಿಗಳ ಗಮನಕ್ಕೆ ಬರದ ರೀತಿಯಲ್ಲಿ ದಾವಾ ಆಸ್ತಿಗಳ ಖಾತೆಯನ್ನು ಸುಳ್ಳು ವಂಶವೃಕ್ಷವನ್ನು ನೀಡಿ ಬದಲಾಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ, ಸರ್ವೆ ನಂ: 36 ರ ಜಮೀನು ಈರಿ ಕೋಂ ಹೆಳವ ಇವರ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ. ಸರ್ವೆ ನಂ: 36 ರ ಜಮೀನು ಈರಿ ಇವರ ಹೆಸರಿನಲ್ಲಿದ್ದು, ಸರ್ವೆ ನಂ: 46 ರ ಜಮೀನು ನನ್ನ

ದೊಡ್ಡಪ್ಪ ರಾಮಯ್ಯ ಇವರ ಹೆಸರಿನಲ್ಲಿದೆ. ಸದರಿ ಜಮೀನು ನನ್ನ ದೊಡ್ಡಪ್ಪನಿಗೆ ಇನಾಮ್ತಿ ಜಮೀನಾಗಿರುತ್ತದೆ. ಸದರಿ ಸರ್ವೆ ನಂಃ 46ರ ದಾಖಲಾತಿಯನ್ನು ನ್ಯಾ.ದ ಮುಂದೆ ಹಾಜರುಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಅದನ್ನು ನನ್ನ ವಕೀಲರ ಕೈಯಲ್ಲಿ ಕೊಟ್ಟಿದ್ದೇನೆ ಎಂದಿದ್ದಾರೆ.

ನನ್ನ ಲಿಖಿತ ಹೇಳಿಕೆಯಲ್ಲಿ ಮನೆ-ಆಸ್ತಿಗಳನ್ನು ಕೈಬಿಡಲಾಗಿದೆ ಎಂದು ನಾವುಗಳು ಹೇಳಿ ಬರೆಸಿರುವುದಿಲ್ಲ. ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಅರ್ಧ ಭಾಗದ ಭಾಗಾಂಶದ ಹಕ್ಕು ಇದೆ ಎಂದರೆ ಸರಿಯಲ್ಲ. ನಾವುಗಳು ವಾದಿಗಳಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ದಾವಾ ಆಸ್ತಿಗಳು ನಮಗೆ ಸೇರಬೇಕು ಎಂದು ನ್ಯಾ.ದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1976 ರಲ್ಲಿ ಆದಂತಹ ಪಂಚಾಯಿತಿ ಪಾಲುಪಾರೀಕತ್ತನ್ನು ನೋಡಿರುವವರು ಇದ್ದಾರೆ. ಸದರಿ ಪಂಚಾಯಿತಿ ಪಾಲುಪಾರೀಕತ್ತನ್ನು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಹೇಳಿ ಬರೆಸಿರುತ್ತಾರೆ, ಆದರೆ ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಪಂಚಾಯಿತಿ ಪಾಲುಪಾರೀಕತ್ತಿನಲ್ಲಿ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಪಂಚಾಯಿತಿ ಪಾಲುಪಾರೀಕತ್ತನ್ನು ಹಾಜರು ಮಾಡದೇ ಇರುವುದರಿಂದ ನನಗೆ ಅದರ ವಿಷಯ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.